## ಕಥೆ



ಗೌಡಾಳಿಕೆಯಲ್ಲಿ ಪರ ಸಂಬಂಧಗಳು ಅನಾಯಾಸವಾಗಿ ನಡೆದು ಹೋಗುತ್ತಿದ್ದದ್ದು ಮಾಮೂಲಿ. ಅಂದ ಮೇಲೆ ಜಯಂತನ ಪ್ರೀತಿ ಮೀನಾಕ್ಷಿಯ ಮೇಲೆ ಇದ್ದದ್ದು ಮೈಮಾಟಕ್ಕೆ ಸೀಮಿತವಾದದ್ದು. ಶೇಕ್ರಿಗೆ ಈ ವಾಸನೆ ಎಂದೋ ಬಡಿದಿತ್ತು. ಒಳಗೇ ನೊಂದುಕೊಳ್ಳುತ್ತಿದ್ದ. ಆದರೆ ಅಸಹಾಯಕನಾಗಿದ್ದ. ಮೀನಾಕ್ಷಿಯ ನವಿರಾದ ಚೆಲುವು ಪೆಡಸಿಗೆ ತಾಳಿ ಕೊಳ್ಳುವಂಥದಲ್ಲ. ಹೊರಗೆ ಜಯಂತನ ಜೊತೆ ವಿಲಾಸೀ ಮಾತಾಡುತ್ತಿದ್ದರೂ ಅವನು ಒಳ ಮನಸ್ಸಿನಲ್ಲಿ ಗಂಭೀರವಾಗಿದ್ದ. ಪಟಾಲಮ್ಮಿನಲ್ಲಿ ಒಂದಾಗಿದ್ದಂತಿದ್ದರೂ ಅವನು ಒಳಗೆ ಒಂಟಿಯಾಗಿರುತ್ತಿದ್ದ. ಅಂತರಂಗದ ಪ್ರೇಮ ಭಾವವನ್ನು ಅರಿತುಕೊಳ್ಳುವಷ್ಟು ಪ್ರಬುದ್ಧೆಯಲ್ಲದ ಮೀನಾಕ್ಷಿಗೆ ಪ್ರೇಮದ ತಿಳಿ ಪಾಠ ಹೇಳುವುದಾದರೂ ಎಂತು ಎಂದು ಮಿಡುಕುತ್ತಿದ್ದ. ಅವಳ ಸ್ನಿಗ್ಧ ಸೌಂದರ್ಯದ ಆರಾಧಕನಾದರೆ ಸಾಲದು, ಅದನ್ನು ಸರಿಯಾದ ದಿಕ್ಕಿಗೆ ತಿರುಗಿಸಿ ಗುರಿ ತಲುಪಿಸುವ ತೀರ್ಮಾನಕ್ಕೆ ಬಂದು ಅವನು ನಿತ್ಯ ಸಂಜೆ ಪಟಾಲಮ್ಮಿನ ಜೋತೆ ಸೇರುವ ಮೊದಲು ಕೋಡಿಗುದ್ದಿನ ಈಶ್ವರ ದೇವರ ಹಾಳು ಮಂಟಪದಲ್ಲಿ ಒಂದರೆ ತಾಸು ಮಗ್ನನಾಗಿ ಕೂಡುವ ಜಾಗದಿಂದ ಎದ್ದು ನಡೆದನು.

ಎರಡು ವರ್ಷದಿಂದ ನಡೆಯುತ್ತಿದ್ದ ಈ ನಾಟಕಕ್ಕೆ ಕೊನೆ ಇದ್ದೇ ಇರಬೇಕಲ್ಲವೇ? ಒಂದಿನ ಚನ್ನಾಗಿದ್ದರೆ ಇನ್ನೊಂದಿನ ಹಾಸಿಗೆ ಹಿಡಿಯುತ್ತಿದ್ದ ಪುಟ್ಟಾಚಾರಿಗೆ ಮಗಳದ್ದೇ ಚಿಂತೆಯಾಗಿ ಮತ್ತಷ್ಟು ಸೊರಗುತ್ತಿದ್ದ. ಮೊಲದ ಮರಿಯಂಗಿದ್ದ ಚೆಲುವೆ ಮಗಳನ್ನು ಯಾವುದಾದರೂ ಹದ್ದು ಹಾರಿಸಿಕೊಂಡು ಹೋಗುವ ಭಯ. ಮೊದಲೇ ವಯಸ್ಸಿಗೆ ಬಂದವಳು ಅವಳಿಗೂ ಆಸೆ, ಆಕಾಂಕ್ಷೆಗಳಿದ್ದೇ ಇರುತ್ತವಲ್ಲವೇ. ಪುಟ್ಟಾಚಾರಿಯ ವಿವೇಕ ಆಗಾಗ ಎಚ್ಚರಿಸುತ್ತಲೇ ಇತ್ತು. ಬಡತನ ಯಾವುದಕ್ಕೂ ಆಸ್ಪದ ನೀಡದೆ ಕೈ ಸೋತು ಕುಂತಿದ್ದ. ಅವನ ಅದೃಷ್ಟವೋ ಏನೋ ಅವನ ಸಂಬಂಧಿಯೊಬ್ಬ ಮೂಡಲ ಸೀಮೆಯ ಚೆಳ್ಳೂರಿನಲ್ಲಿ ಇದೇ ಬಡಗಿ ಕೆಲಸ ಮಾಡಿಕೊಂಡಿದ್ದವನು. ಸುಭದ್ರಮ್ಮನಿಗೆ ಸೋದರ ಸಂಬಂಧಿ. ಅವನ ಹೆಸರು ಈರಾಚಾರಿ ಅಂತ. ಅವನ ಹೆಂಡಿರ ಕಡೆಯ ಹುಡುಗನೊಬ್ಬನಿಗೆ ಹೆಣ್ಣು ನೋಡುತ್ತಿದ್ದು, ಅದು ಅವನಿಗೆ ತಿಳಿದು ಮೀನಾಕ್ಷಿಯನ್ನು ತೋರಿಸಲು ಹುಡುಗನ ಸಮೇತವೇ ಪುಟ್ಟಾಚಾರಿಯ ಮನೆಗೆ ಹೇಳದೇ ಕೇಳದೇ ಬಂದುಬಿಟ್ಟಿದ್ದ. ಅದೃಷ್ಟವೇ ಮನೆ ಬಾಗಿಲಿಗೆ ಬಂದಂತೆ. ಹುಡುಗ ವೈನಾಗಿದ್ದ, ಒಳ್ಳೆ ತೆಳ್ಳಗೆ, ಬೆಳ್ಳಗೆ ಎತ್ತರಕ್ಕಿದ್ದ. ಎರಡೂ ಸಂಬಂಧ ಕೂಡಿ ಬಂದಿದ್ದವು. ಒಪ್ಪಿಗೆಯೂ ಆಗಿ ಮದುವೆ ಏರ್ಪಾಟಿಗೆ ತೊಡಗಿದರು. ವರದಕ್ಷಿಣೆ ಇಲ್ಲದೆ, ಕೈಲಾದಷ್ಟು ಚೆನ್ನಾಗಿ ಮದುವೆ ಮಾಡಿಕೊಡುವುದಾಗಿ ಪುಟ್ಟಾಚಾರಿ ಹೇಳಿದ್ದಕ್ಕೆ. ಹುಡುಗನ ತಂದೆ ತಕರಾರಿಲ್ಲದೆ ಒಪ್ಪಿದ್ದ. ಅಂಥಾ ಚೆಲುವೆ ತನ್ನ ಸೊಸೆಯಾಗುತ್ತಾಳೆಂಬುದೇ ಅವನಿಗೆ ವರದಕ್ಷಿಣೆಯಾಗಿತ್ತು.

ಪುಟ್ಟಾಚಾರಿಯ ಪುಟ್ಟ ಮನೆಯ ಮುಂದೆ ಪುಟ್ಟ ಚಪ್ಪರ ಎದ್ದಿರುವುದ ನೋಡಿ ಊರಿನ ಪಡ್ಡೆ ಪಟಾಲಮ್ಮಿಗೆ ಹೊಟ್ಟೆ ಕಿವುಚಿ ಬಂದಂತಾಯಿತು. ಅದರಲ್ಲೂ ಹಕ್ಕಿ ತಪ್ಪಿಸಿಕೊಂಡಿತು ಎಂದು ಜಯಂತ ಹಲುಬಿದ. ಆದರೆ ನಿಜ ಪ್ರೇಮಿಯಾಗಿದ್ದ ಶೇಕ್ರಿ ಸಿನಿಮಾದ ದೇವದಾಸನಂತೆ ಯಾವುದೋ ದುಃಖಭರಿತ ಗೀತೆಯೊಂದನ್ನು ಗುನುಗಿಕೊಳ್ಳುತ್ತಾ ಕೋಡಿಗುದ್ದಿನ ಈಶ್ವರ ದೇವರ ಮುಂದೆ ಮೌನವಾಗಿ ಕುಂತು ಧ್ಯಾನಸ್ಥನಾಗಿಬಿಟ್ಟ. ತನ್ನ ಅಧೈರ್ಯಕ್ಕೆ, ತನ್ನ ಸ್ಥೈರ್ಯವಿಲ್ಲದ ಭಾವನೆಗಳಿಗೆ ತಾನೇ ನಾಚಿಕೊಂಡ. ತನ್ನ ಕ್ರಾಂತಿಕಾರಕ ಆಲೋಚನೆಯ ಮೊದಲ ಅಧ್ಯಾಯ ಹಿಂಗೆ ದುರಂತದಲ್ಲಿ ಕೊನೆಯಾದದ್ದಕ್ಕೆ ತನ್ನನ್ನೇ ಹಳಿದುಕೊಂಡ.

ಇಲ್ಲಿ ಇವನು ಅಗಲಿಕೆಯ ನೋವು ತಿನ್ನುತ್ತಿರುವಾಗಲೇ ಊರಿನ ಹನುಮಪ್ಪನ ಗುಡಿಯ ಗಂಟೆಗಳು ನಿನಾದಗೈದು ಮಂಗಳದ ಸದ್ದು ಹೊರಡಿಸಿದವು. ಮೀನಾಕ್ಷಿ ಮದುಮಗನ ಕೈ ಹಿಡಿದು ಮಂಗಳಾರತಿ ತೆಗೆದುಕೊಳ್ಳುತ್ತಾ ತನ್ನನ್ನು ಒಂದು ತೀರಕ್ಕೆ ತಲುಪಿಸಿದ ಹನುಮಪ್ಪನಿಗೆ ಮುಂದೆಯೂ ಹಿಂಗೇ ನಡೆಸಿಕೊಡಪ್ಪ ಎಂದು ಪ್ರಾರ್ಥಿಸುತ್ತಿದ್ದಳು. ●